# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2064

ಸದಸ್ಯರ ಹೆಸರು : ಶ್ರೀ ಕೇಶವ ಪ್ರಸಾದ್ ಎಸ್.

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 25.03.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ 'ಶಕ್ತಿ' ಯೋಜನೆ ಜಾರಿಯಾದ ದಿನದಿಂದ ಈವರೆಗೆ ನಾಲ್ಕು ಸಾರಿಗೆ ನಿಗಮಗಳಾದ ಕೆ.ಎಸ್.ಆರ್.ಟಿ.ಸಿ (KSRTC), ಬಿ.ಎಂ.ಟಿ.ಸಿ (BMTC) ವಾ.ಕ.ರ.ಸಾ.ಸಂಸ್ಥೆ (NWKRTC) ಮತ್ತು ಕ.ಕ.ರ.ಸಾ.ನಿಗಮ (KKRTC) ಗಳಲ್ಲಿ ಉಚಿತವಾಗಿ ಪ್ರಯಾಣಿಸಿದ ಮಹಿಳಾ ಫಲಾನುಭವಿಗಳ ಸಂಖ್ಯೆ ಎಷ್ಟು (ನಿಗಮವಾರು ಮಾಹಿತಿ ನೀಡುವುದು) | ರಾಜ್ಯ ಸರ್ಕಾರದ ಮಹಾತ್ವಾಂಕ್ಷಿ ಯೋಜನೆಯಾದ ಶಕ್ತಿ ಯೋಜನೆಯು ದಿನಾಂಕ:11.06.2023ರಿಂದ ಆರಂಭವಾಗಿದ್ದು, ಜಾರಿಯಾದ ದಿನಾಂಕ:11.06.2023 ರಿಂದ ಫೆಬ್ರವರಿ-2026 ರವರೆಗೆ ರಸ್ತೆ ಸಾರಿಗೆ ನಿಗಮಗಳ ಕಾಯ್ದೆ-1950 (The Road Transport Corporation Act,1950) ರಡಿ ರಾಜ್ಯದ ನಾಲ್ಕು ಸಾರಿಗೆ ನಿಗಮಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ 680.87 ಕೋಟಿ ಮಹಿಳಾ ಫಲಾನುಭವಿಗಳು ಪ್ರಯಾಣಿಸಿದ್ದು, ಈ ಯೋಜನೆಗೆ ಮರುಪಾವತಿ ಮಾಡಬೇಕಾದ ಮೊತ್ತ, ಸರ್ಕಾರದಿಂದ ಬಿಡುಗಡೆ ಮಾಡಿರುವ ಹಾಗೂ ಬಿಡುಗಡೆಗೆ ಬಾಕಿ ಇರುವ ಅನುದಾನದ ನಿಗಮವಾರು ವರ್ಷವಾರು ವಿವರಗಳನ್ನು **"ಅನುಬಂಧ"**-ದಲ್ಲಿ ನೀಡಲಾಗಿದೆ. |
| ಆ. | ಈ ಯೋಜನೆಗಾಗಿ ಸರ್ಕಾರವು ಸಾರಿಗೆ ನಿಗಮಗಳಿಗೆ ಮರು ಪಾವತಿ ಮಾಡಬೇಕಾದ ಒಟ್ಟು ಮೊತ್ತ ಎಷ್ಟು; ಈ ಪೈಕಿ ಈವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಮತ್ತು ಇನ್ನೂ ಎಷ್ಟು ಮೊತ್ತದ ಅನುದಾನ ಬಾಕಿ ಇದೆ; (ವರ್ಷವಾರು ಮತ್ತು ನಿಗಮವಾರು ವಿವರ ನೀಡುವುದು) | ನಾಲ್ಕು ಸಾರಿಗೆ ಸಂಸ್ಥೆಗಳಿಗೆ ಶಕ್ತಿ ಯೋಜನೆಯಡಿ ಅನುದಾನವನ್ನು ಪ್ರತಿ ಮಾಹೆಯಾನ ಮುಂಗಡವಾಗಿ ಬಿಡುಗಡೆ ಮಾಡುತ್ತಿದ್ದು, ಮಾರ್ಚ್-2026ರ ಮಾಹೆಯವರೆಗೆ ಈಗಾಗಲೇ ಬಿಡುಗಡೆಯಾಗಿರುತ್ತದೆ.<br><br>**ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ 2023ನೇ ಮೇ ವರೆಗೆ ಒಟ್ಟು ರೂ.4099.38 ಕೋಟಿಗಳ ಹೊಣೆಗಾರಿಕೆ ಬಾಕಿ ಇದ್ದುದ್ದರಿಂದ (ಸಾಲದ ಬಾಕಿ ಹೊಣೆಗಾರಿಕೆ ಒಳಗೊಂಡಂತೆ), ಸದರಿ ಬಾಕಿಯು ನಿಗಮಗಳ ತೀವ್ರ ಆರ್ಥಿಕ ಹಿನ್ನಡೆಗೆ ಕಾರಣವಾಗಿತ್ತು. ನಿಗಮಗಳು ಇಂಧನ ಕಂಪನಿಗಳಿಗೆ ಇಂಧನದ ವೆಚ್ಚವನ್ನು, ಭವಿಷ್ಯ ನಿಧಿ ಮತ್ತು ಸರಬರಾಜುದಾರರ/ ಇತರೆ ಬಿಲ್ಲುಗಳನ್ನು ಪಾವತಿಸದೇ** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

**ಇ.** ಸುಮಾರು ರೂ.4,000 ಕೋಟಿಗೂ ಅಧಿಕ ಮೊತ್ತದ ಅನುದಾನ ಬಾಕಿ ಇರುವುದರಿಂದ ಸಾರಿಗೆ ಸಂಸ್ಥೆಗಳು ಆರ್ಥಿಕವಾಗಿ ದಿವಾಳಿಯಾಗುತ್ತಿರುವುದು ಮತ್ತು ನೌಕರರ ವೇತನ ಹಾಗೂ ನಿವೃತ್ತಿ ಸೌಲಭ್ಯಗಳನ್ನು ನೀಡಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಬಾಕಿಯಿರಿಸಿದ್ದರಿಂದ ನಿಗಮಗಳ ಮೇಲೆ ಆರ್ಥಿಕ ಹೊರೆ ಹೆಚ್ಚಾಗಿತ್ತು.**

ಮೇ 2023 ರವರೆಗೆ ನಿಗಮವಾರು ಬಾಕಿಯಿದ್ದ ಹೊಣೆಗಾರಿಕೆಯ ವಿವರ ಕೆಳಕಂಡಂತಿದೆ:-

**(ರೂ. ಕೋಟಿಗಳಲ್ಲಿ)**

| **ನಿಗಮ/ ಸಂಸ್ಥೆ** | **ಬಾಕಿ ಹೊಣೆಗಾರಿಕೆ ಮೊತ್ತ** |
|---|---|
| ಕ.ರಾ.ರ.ಸಾ.ನಿಗಮ | 1211.18 |
| ಬೆಂ.ಮ.ಸಾ.ಸಂಸ್ಥೆ | 1383.86 |
| ವಾ.ಕ.ರ.ಸಾ.ಸಂಸ್ಥೆ | 1253.01 |
| ಕ.ಕ.ರ.ಸಾ.ನಿಗಮ | 251.33 |
| **ಒಟ್ಟು** | **4099.38** |

2023ರ ಮೇ ತಿಂಗಳ ನಂತರ ದಿನನಿತ್ಯ ಡೀಸೆಲ್ ತೈಲ ಬೆಲೆ ಹೆಚ್ಚಳದೊಂದಿಗೆ ಸಿಬ್ಬಂದಿಗಳ ವೇತನ ಹೆಚ್ಚಳ, ವಾಹನ ಬಿಡಿ ಭಾಗಗಳ ವೆಚ್ಚ ಒಳಗೊಂಡಂತೆ ಒಟ್ಟು ಕಾರ್ಯಾಚರಣೆ ವೆಚ್ಚ ಹೆಚ್ಚಾಗಿ ನಿಗಮಗಳಿಗೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗಿದೆ.

ಮೇಲ್ಕಂಡ ಅಂಶಗಳನ್ನು ಗಮನಿಸಿ, ನಿಗಮಗಳ ಬಾಕಿ ಹೊಣೆಗಾರಿಕೆಯನ್ನು ಕಡಿಮೆ ಮಾಡಲು ಹಾಗೂ ಸಂಸ್ಥೆಗಳನ್ನು ಆರ್ಥಿಕವಾಗಿ ಸದೃಢಗೊಳಿಸಲು ಸರ್ಕಾರದಿಂದ ನಾಲ್ಕು ನಿಗಮಗಳಿಗೆ ಈ ಕೆಳಕಂಡಂತೆ ಸಹಾಯಹಸ್ತ ನೀಡಲಾಗಿದೆ.

ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮ/ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ 2023-24 ರಿಂದ 2025-26ರವರೆಗೆ ಖರೀದಿಸಿರುವ/ ಖರೀದಿ ಹಂತದಲ್ಲಿರುವ ಹೊಸ ಬಸ್ಸುಗಳ ವಿವರ ಕೆಳಕಂಡಂತಿದೆ:

| **ಸಂಸ್ಥೆಗಳು** | **2023-24 (Jan)** | **2024-25** | **2025-26** | **ಒಟ್ಟು** |
|---|---|---|---|---|
| ಕ.ರಾ.ರ.ಸಾ. ನಿಗಮ | 510 | 698 | 10+60* +45** | 1323 |
| ಬೆಂ.ಮ.ಸಾ. | 20 | 820 | - | 2365 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

| ಸಂಸ್ಥೆ | ಡೀಸೆಲ್ | ಡೀಸೆಲ್ | | |
|---|---|---|---|---|
| | 341 ಇ.ವಿ | 755 ಇ.ವಿ | 429 ಇ.ವಿ | |
| ವಾ.ಕ.ರ.ಸಾ. ಸಂಸ್ಥೆ | 296 | 560 | 11+ 354*** | 1221 |
| ಕ.ಕ.ರ.ಸಾ. ನಿಗಮ | 720 | 307 | 146 | 1173 |
| ಒಟ್ಟು | 1887 | 3140 | 1055 | 6082 |

*ಪ್ರಸಕ್ತ 2025-26ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ 60 ನಾನ್ ಎ.ಸಿ. ಸ್ಲೀಪರ್ ಬಸ್‌ಗಳಿಗೆ ಕೇಂದ್ರ ಖರೀದಿ ಆದೇಶ ನೀಡಲಾಗಿದ್ದು, ಸದರಿ ಬಸ್ಸುಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

** ನಿಗಮಕ್ಕೆ 45 ಸಂಖ್ಯೆಯ ಕರ್ನಾಟಕ ಸಾರಿಗೆ ಮಾದರಿಯ ಬಸ್ಸುಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

***ಪ್ರಸಕ್ತ 2025-26ನೇ ಸಾಲಿನಲ್ಲಿ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 354 ಹೊಸ ಬಸ್‌ಗಳನ್ನು ಖರೀದಿಸಲು ಖರೀದಿ ಆದೇಶ ನೀಡಿದ್ದು, ಸದರಿ ಬಸ್‌ಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

ಮುಂದುವರೆದು, ಈಗಾಗಲೇ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡಿದ್ದು, ಮಾರ್ಚ್-2026ರ ನಂತರ ಸಾರಿಗೆ ನಿಗಮಗಳಿಗೆ ಸೇರ್ಪಡೆಗೊಳ್ಳಲಿರುವ ಒಟ್ಟು ಬಸ್‌ಗಳು ವಿವರ ಕೆಳಕಂಡಂತಿರುತ್ತದೆ:

| **ಸಂಸ್ಥೆ/ನಿಗಮ** | **ಬಸ್‌ಗಳ ಸಂಖ್ಯೆ** | **ಬಸ್‌ಗಳ ವಿವರ** |
|---|---|---|
| ಕ.ರಾ.ರ.ಸಾ.ನಿಗಮ | 644 | 500 ಗ್ರಾಮಾಂತರ+ 144 ಡಬಲ್ ಡೋರ್ (ನಗರ) |
| ವಾ.ಕ.ರ.ಸಾ.ಸಂಸ್ಥೆ | 150 | ಗ್ರಾಮಾಂತರ ಬಸ್‌ಗಳು |
| ಕ.ಕ.ರ.ಸಾ.ನಿಗಮ | 56 | ವಿವಿಧ ರೀತಿಯ ಪ್ರೀಮಿಯಂ ಬಸ್‌ಗಳು |
| **ಒಟ್ಟು** | **850** | |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | | 2025-26ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 469(iii)ರಲ್ಲಿ ರಾಜ್ಯದ ವಿವಿಧ ಸಾರಿಗೆ ನಿಗಮಗಳಿಗೆ 2000 ಸಂಖ್ಯೆಯ ಹೊಸ ಡೀಸೆಲ್ ಬಸ್ಸುಗಳನ್ನು ಸೇರ್ಪಡೆಗೊಳಿಸಲಾಗುವುದು ಎಂದು ಘೋಷಿಸಿದ್ದು, ಅದರನ್ವಯ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 900, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 700 ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ 400ರಂತೆ, ಒಟ್ಟು 2000 ಸಂಖ್ಯೆಯ ಹೊಸ ಬಿ.ಎಸ್-VI ಡೀಸೆಲ್ ಬಸ್ಸುಗಳನ್ನು ಹಂಚಿಕೆ ಮಾಡಲಾಗಿದೆ.<br>ಅದರಲ್ಲಿ ಈಗಾಗಲೇ 300 ಡೀಸೆಲ್ ಬಸ್ಸುಗಳನ್ನು ರೂ.12353.00 ಲಕ್ಷಗಳ ಅನುದಾನದಲ್ಲಿ ಖರೀದಿಸಲು ಸರ್ಕಾರದ ಆದೇಶ ಸಂಖ್ಯೆ: ಟಿಡಿ 21 ಟಿಸಿಬಿ 2025, ದಿನಾಂಕ:21.04.2025 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸರ್ಕಾರದಿಂದ ನೀಡಿದ ರೂ.123.53 ಕೋಟಿ ಅನುದಾನದಲ್ಲಿ 330 ಬಸ್ಸುಗಳನ್ನು ಖರೀದಿಸಲು ಖರೀದಿ ಆದೇಶ ನೀಡಲಾಗಿದ್ದು, ಮಾರ್ಚ್-2026ರೊಳಗೆ ಎಲ್ಲಾ ಬಸ್‌ಗಳು ನಿಗಮಕ್ಕೆ ಸೇರ್ಪಡೆಗೊಳ್ಳಲಿವೆ.<br>ಮುಂದುವರೆದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 500 ಹಾಗೂ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 150 ಸಂಖ್ಯೆಯ ಪೂರ್ಣ ನಿರ್ಮಿತ ಬಿ.ಎಸ್-VI ಕರ್ನಾಟಕ Mofussil ಸಾರಿಗೆ ಬಸ್ಸುಗಳನ್ನು ಖರೀದಿಸಲು ಸರ್ಕಾರದ ಆದೇಶ ಸಂಖ್ಯೆ: ಟಿಡಿ 33 ಟಿಸಿಬಿ 2025, ದಿನಾಂಕ: 30.01.2026ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಕುರಿತು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ. ಉಳಿದ 620 ಬಸ್ಸುಗಳಿಗೆ ಅನುದಾನ ನೀಡುವಂತೆ ಕೋರಿರುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ 400 ಬಸ್ಸುಗಳನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಬಸ್ಸುಗಳ ಖರೀದಿಗೆ ಅನುದಾನ ಮಂಜೂರಾತಿ ಕೋರಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುದಾನ ನಿರೀಕ್ಷಿಸಲಾಗಿದೆ.<br>ಕೇಂದ್ರ ಸರ್ಕಾರದ PM e-sewa ಯೋಜನೆಯಡಿಯಲ್ಲಿ ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳಿಗೆ ಒಟ್ಟು 750 ವಿದ್ಯುತ್ ಚಾಲಿತ ಬಸ್ಸುಗಳು ಮತ್ತು PM e-drive ಯೋಜನೆಯಡಿ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಬೆಂ.ಮ.ಸಾ.ಸಂಸ್ಥೆಗೆ 4500 ವಿದ್ಯುತ್ ಚಾಲಿತ ಬಸ್ಸುಗಳನ್ನು GCC ಮಾದರಿಯಲ್ಲಿ ಆಚರಣೆ ಮಾಡಲು ಮಂಜೂರಾತಿ ದೊರೆತಿದ್ದು, ಮುಂದಿನ ದಿನಗಳಲ್ಲಿ ಸೇರ್ಪಡೆಗೊಳಿಸಲು ಯೋಜಿಸಲಾಗಿರುತ್ತದೆ.<br>2026-27ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 480 ರಲ್ಲಿ ನಾಲ್ಕು ಸಾರಿಗೆ ನಿಗಮಗಳಿಗೆ 1000 ಡೀಸೆಲ್ ಬಸ್‌ಗಳನ್ನು ಒದಗಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ.<br>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಿಗೆ ನವೆಂಬರ್-2024ರ ಅಂತ್ಯಕ್ಕೆ ಬಾಕಿ ಉಳಿಸಿಕೊಂಡಿರುವ ಶಾಸನಬದ್ಧ ಪಾವತಿಯಾದ ಭವಿಷ್ಯ ನಿಧಿ ಹಾಗೂ ಇಂಧನ ಬಾಕಿ ಮೊತ್ತ ಪಾವತಿಸಲು ಸರ್ಕಾರದ ಖಾತರಿ/ ಗ್ಯಾರಂಟಿಯೊಂದಿಗೆ ಹಣಕಾಸು ಸಂಸ್ಥೆಗಳಿಂದ ರೂ.2000/- ಕೋಟಿ ಸಾಲ ಪಡೆಯಲು ಸರ್ಕಾರದ ಆದೇಶ ಸಂಖ್ಯೆ: ಟಿಡಿ 45 ಟಿಸಿಬಿ 2023, ದಿನಾಂಕ:31.12.2024ರಲ್ಲಿ ಅನುಮೋದನೆ ನೀಡಲಾಗಿದೆ ಹಾಗೂ ಸದರಿ ಸಾಲದ ಮೊತ್ತವನ್ನು ಸಂಪೂರ್ಣವಾಗಿ ಸರ್ಕಾರವೇ ಮರು ಪಾವತಿಸುತ್ತದೆ.<br>**(ರೂ. ಕೋಟಿಗಳಲ್ಲಿ)**<br>**ಸಂಸ್ಥೆ/ನಿಗಮ** — **ಮೊತ್ತ**<br>ಕ.ರಾ.ರ.ಸಾ.ನಿಗಮ — 623.80<br>ಬೆಂ.ಮ.ಸಾ.ಸಂಸ್ಥೆ — 589.20<br>ವಾ.ಕ.ರ.ಸಾ.ಸಂಸ್ಥೆ — 646.00<br>ಕ.ಕ.ರ.ಸಾ.ನಿಗಮ — 141.00<br>**ಒಟ್ಟು** — **2000.00**<br>2025-26ನೇ ಸಾಲಿನಲ್ಲಿ ಸದರಿ ರೂ.2000 ಕೋಟಿ ಸಾಲದ ಮೊತ್ತದ ಅಸಲು ಮತ್ತು ಬಡ್ಡಿ ಪಾವತಿಗಾಗಿ ನಾಲ್ಕು ಸಾರಿಗೆ ನಿಗಮಗಳಿಗೆ ಒಟ್ಟು ರೂ.452.00 ಕೋಟಿಗಳ ಅನುದಾನವನ್ನು ಸಹ ಒದಗಿಸಲಾಗಿದ್ದು, ಅದರಂತೆ ತ್ರೈಮಾಸಿಕವಾರು ಅನುದಾನವನ್ನು ಬಿಡುಗಡೆಗೊಳಿಸಲಾಗುತ್ತಿದೆ.<br>ನಾಲ್ಕು ಸಾರಿಗೆ ಸಂಸ್ಥೆಗಳಿಗೆ ದಿನಾಂಕ:01.01.2020 ರಿಂದ ದಿನಾಂಕ:28.02.2023 ರವರೆಗಿನ ಅವಧಿಯಲ್ಲಿ ಸೇವಾವಿಮುಕ್ತಿ ಹೊಂದಿದ ಅಧಿಕಾರಿ/ ನೌಕರರಿಗೆ ದಿನಾಂಕ:01.01.2020ರ ಪರಿಷ್ಕೃತ ವೇತನ ಶ್ರೇಣಿಯನ್ವಯ ಪಾವತಿಸಬೇಕಾದ ಉಪಧನ ಹಾಗೂ ಗಳಿಕೆ ರಜೆ ನಗದೀಕರಣದ ವ್ಯತ್ಯಾಸ ಮೊತ್ತದ ಪಾವತಿಗಾಗಿ |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>ಒಟ್ಟು ರೂ.224.05 ಕೋಟಿಗಳನ್ನು ನಿಗಮವಾರು ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದ್ದು, ಅದರಂತೆ ನಿವೃತ್ತ ನೌಕರರಿಗೆ ಈಗಾಗಲೇ ಪಾವತಿ ಮಾಡಲಾಗಿರುತ್ತದೆ:-<br><br>(ರೂ.ಕೋಟಿಗಳಲ್ಲಿ)<br>
<table>
<tr><th>ಸಂಸ್ಥೆ</th><th>ಅನುದಾನ</th></tr>
<tr><td>ಕ.ರಾ.ರ.ಸಾ.ನಿಗಮ</td><td>86.55</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>50.25</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>51.50</td></tr>
<tr><td>ಕ.ಕ.ರ.ಸಾ.ನಿಗಮ</td><td>35.75</td></tr>
<tr><td>ಒಟ್ಟು</td><td>224.05</td></tr>
</table>
ನಾಲ್ಕು ಸಾರಿಗೆ ನಿಗಮಗಳ ನಗದು ಕೊರತೆಯನ್ನು ನಿಭಾಯಿಸಲು 2023-24 ಮತ್ತು 2024-25ನೇ ಸಾಲಿನಲ್ಲಿ ನಿಗಮಗಳು ಕ್ರಮವಾಗಿ ಸರ್ಕಾರಕ್ಕೆ ಪಾವತಿ ಮಾಡಬೇಕಾದ ಮೋಟಾರು ವಾಹನ ತೆರಿಗೆ ರೂ.581.47 ಕೋಟಿ ಮತ್ತು ರೂ.637.76 ಕೋಟಿ ಸೇರಿದಂತೆ ಒಟ್ಟು ರೂ.1219.23 ಕೋಟಿಗಳ ಪಾವತಿಯಿಂದ ವಿನಾಯಿತಿ ನೀಡಲಾಗಿದೆ.<br>ನಾಲ್ಕು ನಿಗಮಗಳ ನೌಕರರಿಗೆ ದಿನಾಂಕ:01.01.2021ರಿಂದ 28.02.2023ರವರೆಗೆ ಒಟ್ಟು 26 ತಿಂಗಳ ಹಿಂಬಾಕಿ ಮೊತ್ತ ರೂ.1271.92 ಕೋಟಿಗಳನ್ನು ಪಾವತಿಸಲು ಹಾಗೂ ದಿನಾಂಕ:01.04.2025 ರಿಂದ ಜಾರಿಗೆ ಬರುವಂತೆ ಶೇಕಡಾವಾರು ಎಷ್ಟು ಪ್ರಮಾಣದಲ್ಲಿ ಪರಿಷ್ಕರಿಸುವ ಕುರಿತು ಕಾರ್ಮಿಕ ಸಂಘಟನೆಗಳ ಜೊತೆ ಚರ್ಚಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸರ್ಕಾರದ ಆದೇಶ ಸಂಖ್ಯೆ:ಟಿಡಿ 12 ಟಿಸಿಬಿ 2023, ದಿನಾಂಕ:18.02.2026ರಲ್ಲಿ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ.<br>ಮುಂದುವರೆದು, ರಾಜ್ಯದ ನಾಲ್ಕು ಸಾರಿಗೆ ನಿಗಮ/ಸಂಸ್ಥೆಗಳಲ್ಲಿ ಎಲ್ಲಾ ಅಧಿಕಾರಿ/ನೌಕರರ ವೇತನವನ್ನು ಸಕಾಲದಲ್ಲಿ ಪಾವತಿಸಲಾಗುತ್ತಿದೆ.</td></tr>
<tr><td>ಈ.</td><td>ಕೋವಿಡ್ ಸಂದರ್ಭದಲ್ಲಿ ಮೃತಪಟ್ಟ ಸಾರಿಗೆ ನೌಕರರ ಕುಟುಂಬಗಳಿಗೆ ನೀಡಬೇಕಾದ ರೂ.30 ಲಕ್ಷ ಪರಿಹಾರ</td><td>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆ/ನಿಗಮಗಳಲ್ಲಿ ಕೋವಿಡ್-19ರ ಸಾಂಕ್ರಾಮಿಕ ರೋಗಕ್ಕೆ ಒಟ್ಟು 356 ನೌಕರರು ಮೃತಪಟ್ಟಿದ್ದು, ಸರ್ಕಾರದ ಆದೇಶ ಸಂಖ್ಯೆ:ಆಇ:114: ವೆಚ್ಚ 11/2020 ದಿನಾಂಕ:02.05.2020ರಲ್ಲಿ ಅಂಗನವಾಡಿ</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | ಧನವನ್ನು ಹಣದ ಕೊರತೆಯ ನೆಪವೊಡ್ಡಿ ತಡೆಹಿಡಿಯಲಾಗಿದೆಯೇ; ಈ ಬಗ್ಗೆ ಹೈಕೋರ್ಟ್ ವ್ಯಕ್ತಪಡಿಸಿರುವ ಆಕ್ಷೇಪಣೆಗಳಿಗೆ ಸರ್ಕಾರದ ಪ್ರತಿಕ್ರಿಯೆಯೇನು; | ಕಾರ್ಯಕರ್ತೆಯರು/ ಸಹಾಯಕರು, ಪೋಲಿಸ್ ಅಧಿಕಾರಿಗಳು/ ಸಿಬ್ಬಂದಿ, ಹೋಮ್ ಗಾರ್ಡ್ ಗಳನ್ನು, ಪೌರರಕ್ಷಣಾ ದಳ, ಅಗ್ನಿಶಾಮಕ ದಳದ ನೌಕರರು/ ಅಧಿಕಾರಿಗಳು ಬಂದೀಖಾನೆ ಸಿಬ್ಬಂದಿಗಳು, ಪೌರಕಾರ್ಮಿಕರು/ ಸ್ಯಾನಿಟೈಸರ್ ಕೆಲಸಗಾರರು, ಅವರಿಗೆ ಸಂಬಂಧಿಸಿದ ವಾಹನಗಳ ಚಾಲಕರು/ ಲೋಡರ್ ಗಳನ್ನು ಮಾತ್ರ ಕೊವಿಡ್ ವಾರಿಯರ್ ಎಂದು ಪರಿಗಣಿಸಿ ಆದೇಶಿಸಲಾಗಿತ್ತು.<br>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮಂಡಳಿ ಸಭೆಯ ಠರಾವು ಸಂಖ್ಯೆ: 10195/443, ದಿನಾಂ:20.05.2020ರ ನಿರ್ಣಯದಂತೆ ದಿನಾಂಕ:19.05.2020 ರಿಂದ 31.12.2020ರ ಅವಧಿಯಲ್ಲಿ ಮೃತಪಟ್ಟ ನೌಕರರಿಗೆ ಮಾತ್ರ ಪರಿಹಾರವನ್ನು ವಿತರಿಸಲು ಹಾಗೂ ಈ ಅವಧಿಯಲ್ಲಿ ಮೃತಪಟ್ಟವರ ಪ್ರಕರಣಗಳಿಗೆ ಸರ್ಕಾರದ ವತಿಯಿಂದ ತಲಾ ರೂ.30.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿ ದಿನಾಂಕ:01.06.2020ರಂದು ಕರ್ನಾಟಕ ರಸ್ತೆ ಸಾರಿಗೆ ನಿಗಮವು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು.<br>ಪ್ರಸ್ತಾವನೆಯ ಕುರಿತು ಸರ್ಕಾರದ ಪತ್ರ ಸಂಖ್ಯೆ: ಟಿಡಿ 08 ಟಿಸಿಬಿ 2020, ದಿನಾಂಕ:07.07.2020ರ ಪತ್ರದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ನಿಧನರಾದ ನೌಕರರ ಅವಲಂಭಿತರಿಗೆ ರೂ.30.00 ಲಕ್ಷಗಳ ಪರಿಹಾರವನ್ನು ತಮ್ಮ ಆಂತರಿಕ ಸಂಪನ್ಮೂಲದಿಂದ ಮಂಜೂರು ಮಾಡುವ ಕುರಿತು ಕ.ರಾ.ರ.ಸಾ.ನಿಗಮದ ಮಂಡಳಿ ಸಭೆಯಲ್ಲಿ ಮಂಡಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳುವಂತೆ ತಿಳಿಸಲಾಗಿತ್ತು. ಆದರೆ, ಆಗಿನ ಆಡಳಿತ ಮಂಡಳಿಯು ಸಂಪನ್ಮೂಲಗಳ ಕೊರತೆಯಿಂದಾಗಿ ಯಾವುದೇ ಸ್ಪಷ್ಟವಾದ ತೀರ್ಮಾನ ತೆಗೆದುಕೊಂಡಿರುವುದಿಲ್ಲ.<br>ಆದರೆ ಸರ್ಕಾರದಿಂದ ಸೂಕ್ತ ನಿರ್ದೇಶನ ದೊರೆಯುವ ಮೊದಲೇ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ 07 ಸಿಬ್ಬಂದಿಗಳ ಮೃತಾವಲಂಬಿತರಿಗೆ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ 04 ಸಿಬ್ಬಂದಿಗಳ ಮೃತಾವಲಂಬಿತರಿಗೆ ತಲಾ ರೂ.30 ಲಕ್ಷಗಳಂತೆ ನಿಗಮಗಳ ಹಂತದಲ್ಲಿ ಪರಿಹಾರವನ್ನು ಪಾವತಿಸಲಾಗಿತ್ತು.<br>ಮುಂದುವರೆದು, ಆರ್ಥಿಕ ಇಲಾಖೆಯು ಆದೇಶ ಸಂಖ್ಯೆ:ಆಇ:114:ವೆಚ್ಚ 11/2020, ದಿನಾಂಕ:02.05.2020ರಲ್ಲಿ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಸಾರಿಗೆ ನಿಗಮಗಳ ನೌಕರರನ್ನು ಕೋವಿಡ್ ವಾರಿಯರ್ ಎಂದು ಪರಿಗಣಿಸದ ಕಾರಣ ನಿಗಮಗಳ ಉಳಿದ ಮೃತಾವಲಂಭಿತರಿಗೆ ಅನುದಾನವನ್ನು ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ.<br><br>ಪ್ರಸ್ತುತ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಮೃತರಾದ ಸಿಬ್ಬಂದಿಗಳ ಅವಲಂಭಿತರಿಗೆ ಪರಿಹಾರ ಕೋರಿ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ :16157/2022ರನ್ವಯ ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ. ಅಂತಿಮ ನಿರ್ಣಯವನ್ನು ನಿರೀಕ್ಷಿಸಲಾಗಿದೆ. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಸಂಬಂಧಿಸಿದಂತೆ PIL-16157/22 ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದು, ಇನ್ನು ಇತ್ಯರ್ಥವಾಗಿರುವುದಿಲ್ಲ ಮತ್ತು WP No. 105622/23ರಲ್ಲಿ ಸಂಸ್ಥೆಗೆ ಮನವಿದಾರರ ಅರ್ಜಿಯನ್ನು ಪರಿಗಣಿಸಿ ಸರ್ಕಾರದ ಆದೇಶದಂತೆ 12 ವಾರದೊಳಗಾಗಿ ಪರಿಹಾರ ಪಾವತಿಸುವುದು ಎಂದು ಆದೇಶಿಸಿದ್ದು, ಸದರಿ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಬಾಕಿ ಇರುತ್ತದೆ. |
| ಉ. | ಸಾರಿಗೆ ನಿಗಮಗಳ ಆರ್ಥಿಕ ಸುಸ್ಥಿತಿಯನ್ನು ಕಾಪಾಡಲು ಮತ್ತು ಬಾಕಿ ಇರುವ ಎಲ್ಲಾ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ನಿಗದಿಪಡಿಸಿರುವ ಕಾಲಮಿತಿ ಏನು? | ನಿಗಮಗಳ ಬಾಕಿ ಹೊಣೆಗಾರಿಕೆಯನ್ನು ಕಡಿಮೆ ಮಾಡಲು ಹಾಗೂ ಸಂಸ್ಥೆಗಳನ್ನು ಆರ್ಥಿಕವಾಗಿ ಸದೃಢಗೊಳಿಸಲು ಸರ್ಕಾರದಿಂದ ನಾಲ್ಕು ನಿಗಮಗಳಿಗೆ ಪ್ರಶ್ನೆ "ಅ", "ಆ" ಮತ್ತು "ಇ"ರಲ್ಲಿ - ಉತ್ತರಿಸಿರುವಂತ ಸಹಾಯಹಸ್ತ ನೀಡಲಾಗಿದೆ. |

ಸಂಖ್ಯೆ: ಟಿಡಿ 141 ಟಿಸಿಕ್ಯೂ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ

## ನಾಲ್ಕು ಸಾರಿಗೆ ಸಂಸ್ಥೆಗಳ ಶಕ್ತಿ ಯೋಜನೆಯ ಅಂಕಿ-ಅಂಶಗಳು
## (ಜೂನ್-2023 ರಿಂದ ಫೆಬ್ರುವರಿ-2026 ವರೆಗೆ)

(ರೂ.ಕೋಟಿಗಳಲ್ಲಿ)

| ಸಂಸ್ಥೆ/ನಿಗಮ | ವರ್ಷ | ಫಲಾನುಭವಿಗಳ ಸಂಖ್ಯೆ (ಕೋಟಿಗಳಲ್ಲಿ) | ಪ್ರಯಾಣದ ವೆಚ್ಚ | ಬಿಡುಗಡೆ ಮೊತ್ತ | ಬಾಕಿ ಮೊತ್ತ |
|---|---|---|---|---|---|
| ಕ.ರಾ.ರ.ಸಾ.ನಿಗಮ | 2023-2024 | 56.27 | 1664.42 | 1211.80 | 452.62 |
| | 2024-2025 | 75.98 | 2401.00 | 1905.20 | 495.80 |
| | 2025-2026 | 76.65 | 2706.03 | 1880.86 | 825.17 |
| ಬೆಂ.ಮ.ಸಾ.ಸಂಸ್ಥೆ | 2023-2024 | 57.84 | 755.10 | 549.67 | 205.43 |
| | 2024-2025 | 77.27 | 1059.37 | 864.59 | 194.78 |
| | 2025-2026 | 82.51 | 1282.80 | 833.01 | 449.79 |
| ವಾ.ಕ.ರ.ಸಾ.ಸಂಸ್ಥೆ | 2023-2024 | 42.14 | 1076.13 | 792.22 | 283.91 |
| | 2024-2025 | 56.69 | 1507.74 | 1232.18 | 275.55 |
| | 2025-2026 | 59.61 | 1742.37 | 1185.76 | 556.60 |
| ಕ.ಕ.ರ.ಸಾ.ನಿಗಮ | 2023-2024 | 26.81 | 884.72 | 646.06 | 238.66 |
| | 2024-2025 | 34.71 | 1217.35 | 1013.03 | 204.32 |
| | 2025-2026 | 34.39 | 1350.48 | 959.37 | 390.11 |
| ಒಟ್ಟಾರೆ ನಾಲ್ಕು ನಿಗಮ / ಸಂಸ್ಥೆ | 2023-2024 | 183.07 | 4380.37 | 3199.75 | 1180.62 |
| | 2024-2025 | 244.65 | 6185.46 | 5015.00 | 1170.46 |
| | 2025-2026 | 253.16 | 7081.68 | 4859.00 | 2222.68 |
| **ಒಟ್ಟಾರೆ** | | **680.87** | **17647.50** | **13073.75** | **4573.75** |